# ಸಂಕೇತಿ ವಾರ್ತಾ

ಬೆಟ್ಟದಪುರ ಸಂಕೇತಿ ಸಂಘದ ಮಾಸಪತ್ರಿಕೆ

ಶ್ರೀ ತಾರಣ ಸಂ॥ ವೈಶಾಖ ಮಾಸ — ಸಂಪುಟ - ೧೯

ಏಪ್ರಿಲ್ - ೨೦೦೪ — ಸಂಚಿಕೆ - ೦೪


# Salabega

## Lord Jagannath's Muslim devotee

SALABEGA lived in the first half of the 17th Century. Nilamani Mishra, who has written a comprehensive account of the poet and his works, determines the birth of Salabega between circa AD 1607-1608. Salabega was the son of the Mugual subedar, Lalbeg, who was overcome with passion looking at a Brahmin widow returning from her bath at Dandamukundapur. He forcibly abducted and married her. Sala bega was later born to this widow.

It is believed that the poet suffered from some incurable ailment and through prayers to Lord Jagannatha, as advised by his mother, he was miraculously cured. Salabega, being the son of a Muslim, was denied entry into the temple but his deep devotion was answered by his dear Lord in his manifestation as Patitapabnana insidethe Lions' Gate. The poet identified Jagannatha completely with Sri Krishna. He was always eager to witness the Ratha Yatra so he could get a glimpse of his Lord. Once he was held up on way while





returning from Vrindavan and prayed earnestly to the Lord that he should wait for him on the Nandighosha chariot till he reached Puri. The Lord waited there and gave a darshan to his dear devotee Salabega on the Bada Danda, near Balagandi.

Salabega composed numerous devotional songs but not all of them have survived. Most of his compositions are prayers and hymns to Lord Jagannatha and Krishna. A good number of these deal with the romantic dalliance of Krishna with the gopis and Radha, while a few are inspired by the vatsalya ras, the sweet, motherly feeling Yashoda had for child Krishna.

His deep devotion has intensity and passion, outstanding even in the devotional literature of the Bhakti era. Although the poet was denied entry into the temple his descriptions of the inner compound and the sanctum are among the most detailed and accurate in the devotional literature of Orissa. His song 'Ahe Neelagiri...' is perhaps the best description of Bedha Parikrama, or the prescribed circumambulation of the Srimandira. Many of the historical events of the period are recounted in his songs. The poet refers, with deep anguish, to the depredations of the marauders in their attacks on Puri and the repeated attempts to loot and desecrate the Srimandira. This frequently necessitated shifting the deities outside the main sanctum and the poet gives graphic details in the song 'kene gheni jaucchha Jagannathanku...'



# ಅಧ್ಯಕ್ಷ ನುಡಿ

ಸಂಘದ ಹಿರಿಯ ಹಿತೈಷಿಗಳೂ, ಹಿಂದಿನ ಕಾರ್ಯದರ್ಶಿಗಳೂ, ಇಳಿವಯಸ್ಸಿನಲ್ಲೂ ಉತ್ಸಾಹದ ಚಿಲುಮೆಯಂತಿದ್ದ ಶ್ರೀ ಎಸ್. ಕೆ. ನಾರಾಯಣರಾಯರು ಇನ್ನಿಲ್ಲ. ಸ್ನೇಹಜೀವಿಯಾಗಿ ನೂರಾರು ಜನರಿಗೆ ಸಹಾಯ ಹಸ್ತ ನೀಡುತ್ತಿದ್ದ ದಿವಂಗತರು ಸಂಘದ ಏಳಿಗೆಗಾಗಿ ವಿಶೇಷವಾಗಿ ಶ್ರಮಿಸಿದರು. ಮುಖ್ಯವಾಗಿ 'ಖಾಂಡ್ವಾ' ಪ್ರಕರಣದಲ್ಲಿ ಸಂಘಕ್ಕೆ ಭಾರೀ ಮೊತ್ತವನ್ನು ತಂದುಕೊಡುವುದರಲ್ಲಿ ಅಪಾರ ಆಸ್ಥೆ, ಶ್ರಮ ವಹಿಸಿದವರು. (ವ್ಯಕ್ತಿ ಚಿತ್ರವನ್ನು ಪ್ರತ್ಯೇಕವಾಗಿ ಕೊಡಲಾಗಿದೆ.) ದಿವಂಗತ ನಾರಾಯಣರಾಯರ ಆತ್ಮಕ್ಕೆ ಎಲ್ಲರ ಪರವಾಗಿ ಶಾಂತಿಯನ್ನು ಕೋರುತ್ತೇನೆ.

ದಿವಂಗತ ನಾರಾಯಣರಾಯರ ಮೊಮ್ಮಕ್ಕಳು (ಅಮೆರಿಕಾದಲ್ಲಿ ವಾಸ್ತವ್ಯ ಹೂಡಿರುವ ಶ್ರೀ ಎಸ್. ಎನ್. ಜಗನ್ನಾಥ ಅವರ ಮಕ್ಕಳು) ನಾರಾಯಣರಾಯರ ನೆನಪಿನಲ್ಲಿ ಸಂಘದ ವಿದ್ಯಾರ್ಥಿ ನಿಲಯಕ್ಕೆ ಸೋಲಾರ್ ವಾಟರ್ ಹೀಟರ್ (Solar Water Heater)ನ್ನು ಕೊಡುಗೆಯಾಗಿ ನೀಡಿದ್ದಾರೆ. ಸಂಘಕ್ಕೂ, ವಿದ್ಯಾರ್ಥಿಗಳಿಗೂ ಬಹು ಉಪಯುಕ್ತವಾಗಿರುವ ಈ ಕೊಡುಗೆಗಾಗಿ ಶ್ರೀ ಜಗನ್ನಾಥ್ ಮತ್ತು ಅವರ ಮಕ್ಕಳಿಗೆ ಸಂಘದ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಇದೇ ಸಂದರ್ಭದಲ್ಲಿ ನಮ್ಮ ಉದಾರ ದಾನಿಗಳಲ್ಲಿ ಪ್ರಮುಖರಾದ ಶ್ರೀ ಆರ್.ಜಿ.ಎನ್. ಸ್ವಾಮಿಯವರು ತಮ್ಮ ಮಾತಾ-ಪಿತೃಗಳ ಹೆಸರಿನಲ್ಲಿ ವೈದ್ಯಕೀಯ ಸಹಾಯ ನಿಧಿಗಾಗಿ ರೂ. 1 ಲಕ್ಷದ ಬೃಹತ್ ಕೊಡುಗೆಯನ್ನು ನೀಡಿರುವುದನ್ನು ಮತ್ತೆ ಸ್ಮರಿಸಬಹುದಾಗಿದೆ.

ಸಂಘವು ವೃದ್ಧಾಶ್ರಮವನ್ನು ನಿರ್ಮಿಸುವುದರ ಬಗ್ಗೆ ಸಂಘದ ಬಾಂಧವರನ್ನು ಅಭಿಪ್ರಾಯ, ಸಹಾಯಗಳಿಗಾಗಿ ಕೇಳಿದ್ದೆವಷ್ಟೆ, ತತ್‌ಕ್ಷಣವೇ ನಮ್ಮ ಅಭಿಮಾನಿ ದಾನಿಗಳಾದ ಶ್ರೀಮತಿ ಶಾರದಾರಾವ್ ಅವರು ರೂ. 10,000/- ಮೊತ್ತದ ಕೊಡುಗೆಯನ್ನು 'ವೃದ್ಧಾಶ್ರಮ ನಿಧಿ'ಗಾಗಿ ನೀಡಿದ್ದಾರೆ. ನಮ್ಮ ಯೋಜನೆಗಳಿಗೆ ಇಂತಹ ಶೀಘ್ರ ಗುಣಾತ್ಮಕ ಪ್ರತಿಕ್ರಿಯೆ ನಮ್ಮಲ್ಲಿ ಉತ್ಸಾಹವನ್ನು ಇಮ್ಮಡಿಗೊಳಿಸುತ್ತದೆ. ಶ್ರೀಮತಿ ಶಾರದಾರಾವ್ ಅವರಿಗೆ ಆದರ ಪೂರ್ವಕ ವಂದನೆಗಳು.

**- ಎಂ ನರಸಿಂಹನ್**









# ಕಾರ್ಯದರ್ಶಿ ಕಾಲಂ

ಆತ್ಮೀಯ ಬಂಧುಗಳೇ,

ಒಗಟ್ಟಿನಲ್ಲಿ ಬಲವಿದೆ ಎಂಬ ಹಳೆಯ ಗಾದೆ ಇಂದಿಗೂ ಎಷ್ಟು ಪ್ರಸ್ತುತ ಅಲ್ಲವೆ ? ಮುಖ್ಯವಾಗಿ ನಮ್ಮ ಸಂಘದಂತಹ ಚಿಕ್ಕ ಸಮೂಹಗಳು ಹೆಚ್ಚು ಹೆಚ್ಚು ಪುರೋಗಾಮೀ ಕಾರ್ಯಗಳನ್ನು ನಡೆಸಲು ಎಲ್ಲ ಬಾಂಧವರ ಒಂದೇ ಮನಸ್ಸಿನಿಂದ ಕೂಡಿದ ಬೆಂಬಲ ಅತ್ಯಗತ್ಯ. ಇದು ತಮ್ಮೆಲ್ಲರಿಗೂ ತಿಳಿಯದ ವಿಷಯವೇನಲ್ಲ. ಸಂಘವು ಸಾಧಿಸಿರುವ, ನಿರ್ವಹಿಸುತ್ತಿರುವ ಅನೇಕ ಬೃಹತ್ ಕಾರ್ಯಯೋಜನೆಗಳಿಗೆ ಬಹುಪಾಲು ಬಾಂಧವರ ಅಭಿಮಾನ, ಅಂತಃಕರಣ, ಅಮೂಲ್ಯ ಕೊಡುಗೆಗಳೇ ಕಾರಣ ಎಂಬುದೂ ನಿರ್ವಿವಾದ. ಆದರೂ ಕೆಲವು ಕಡೆಗಳಿಂದ ನಮ್ಮ ಕಾರ್ಯನಿರ್ವಹಣೆಗೆ ಆಗುತ್ತಿರುವ ಕಿರಿಕಿರಿ, ಅಡೆತಡೆಗಳನ್ನು ಕಂಡರೆ ಖೇದವಾಗುತ್ತದೆ. ಇತ್ತೀಚೆಗೆ ನಡೆದ ಸರ್ವಸದಸ್ಯರ ಸಭೆಯಲ್ಲಿ ನಡೆದ ಕೂಲಂಕಷ ಚರ್ಚೆಯ ನಂತರವೂ ಕೆಲವು ಅತೃಪ್ತ ಸದಸ್ಯರಿಂದ ಅನವಶ್ಯಕ ಕಿರುಕುಳ ಮುಂದುವರೆಯುತ್ತಿರುವುದು ವಿಷಾದದ ಸಂಗತಿ. ಯಾವುದೇ ಭಿನ್ನಾಭಿಪ್ರಾಯವನ್ನು ಚರ್ಚೆ-ಸಂಧಾನದ ಮೂಲಕ ಬಗೆಹರಿಸಿಕೊಳ್ಳಲು ಸಾಧ್ಯವಿದೆ. ಈಗಲೂ ಅರ್ಥಪೂರ್ಣ ಚರ್ಚೆಗೆ ಸಿದ್ಧವಿರುವ ಸಂಘದ ಕಾರ್ಯಕಾರಿ ಸಮಿತಿಯು, ಸಂಘವನ್ನು ಬಲಪಡಿಸುವ ನಿಟ್ಟಿನಲ್ಲಿ ಎಲ್ಲರ ಸಹಕಾರವನ್ನು ನಿರೀಕ್ಷಿಸುತ್ತದೆ.

ಸಂಘದ ವೆಬ್‌ಸೈಟ್‌ನ್ನು ಚಾಲ್ತಿಯಲ್ಲಿಡಲು ಪ್ರತಿವರ್ಷ ಶುಲ್ಕವನ್ನು ನೀಡಬೇಕಾಗುತ್ತದೆ. ಸಂಘವೇ ಈ ಖರ್ಚನ್ನು ಪ್ರತಿವರ್ಷವೂ ನಿಭಾಯಿಸುವುದು ಸದ್ಯಕ್ಕೆ ಸಾಧ್ಯವಾಗುತ್ತಿಲ್ಲ. ಅಮೆರಿಕಾ ನಿವಾಸಿಯಾಗಿರುವ ಶ್ರೀ ಎಸ್.ಎನ್. ಜಗನ್ನಾಥ್ ಅವರು ಈ ವರ್ಷವೂ ಈ ಶುಲ್ಕವನ್ನು ನೀಡಿದ್ದು, ಈ ವರ್ಷವೂ ತಾವೇ ನೀಡುವುದಾಗಿ ಆಶ್ವಾಸನೆ ಕೊಟ್ಟಿದ್ದಾರೆ. ಶ್ರೀಯುತರಿಗೆ ಸಂಘದ ಆಭಾರ ಮನ್ನಣೆ.

ಈ ಹಿಂದೆಯೇ ತಿಳಿಸಿರುವಂತೆ ಉಭಯ ಸಂಕೇತಿಗಳ (ಬೆಟ್ಟದಪುರ ಮತ್ತು ಕೌಶಿಕ) ಅನುಕೂಲಕ್ಕಾಗಿ ಅಮೆರಿಕಾದಲ್ಲಿರುವ ಕೆಲವು ಸಂಕೇತಿ ಬಾಂಧವರ ಉದಾರ ಕೊಡುಗೆಗಳಿಂದ ಸ್ಥಾಪಿತವಾಗಿರುವ ಆಪತ್ಕಾಲ ಪರಿಹಾರ ನಿಧಿ (Distress Relief Fund) ಯಿಂದ ಅನಾರೋಗ್ಯದಿಂದ ನರಳುತ್ತಿರುವ ಅನುಕೂಲತೆಗಳಿಲ್ಲದಿರುವ ಸಂಕೇತಿ ಬಂಧುಗಳಿಗೆ ರೂ. 10,000ಗಳಿಗಿಂತ ಮೀರದ ಧನ ಸಹಾಯ ಮಾಡಲಾಗುವುದು. ಇಂತಹ ಸಹಾಯದ ಅವಶ್ಯಕತೆ ಇರುವ ನಮ್ಮ ಸಂಕೇತಿ ಬಾಂಧವರು ಸಂಘದ ಅಧ್ಯಕ್ಷರನ್ನಾಗಲೀ ಅಥವಾ ನನ್ನನ್ನಾಗಲೀ ಸಂಪರ್ಕಿಸಬಹುದು.

ಸಂಘದ ಕಾರ್ಯಕಾರಿ ಸಮಿತಿಯ ಜಂಟೀಕಾರ್ಯದರ್ಶಿಯಾಗಿ ಕ್ರಿಯಾಶೀಲರಾಗಿರುವ ಆತ್ಮೀಯ ಡಾ|| ಹೆಚ್.ಎನ್. ಸುರೇಶ್ ಅವರು ಹೃದಯಕ್ಕೆ ಸಂಬಂಧಿಸಿದ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ. ಆದಷ್ಟು ಬೇಗ ಗುಣಮುಖರಾಗಿ ಸಂಘದ ಹಾಗೂ ತಮ್ಮ ಚಟುವಟಿಕೆಗಳಲ್ಲಿ ಎಂದಿನಂತೆ ತೊಡಗಿಸಿಕೊಳ್ಳುವಂತಾಗಲಿ ಎಂದು ಹಾರೈಸುತ್ತೇನೆ.

**- ಆರ್. ಎಸ್. ಭಾಸ್ಕರ ಅವಧಾನಿ**



# ★ ★ ★ ಶುಭ ಸಮಾಚಾರಗಳು ★ ★ ★

## ಗೃಹಪ್ರವೇಶ

| ತಾರೀಖು | ಹೆಸರು |
|---|---|
| 02.04.04 ದಾವಣಗೆರೆ (ಸಿದ್ದವೀರಪ್ಪ ಬಡಾವಣೆ) | ಶ್ರೀಮತಿ ಅಹಲ್ಯಾ ಮತ್ತು ಶ್ರೀ ಕೆ. ಎಸ್. ರಘುನಾಥ್ (ಶ್ರೀಮತಿ ಪದ್ಮಾವತಿ ಮತ್ತು ಶ್ರೀ ಕೆ. ಜಿ. ಶ್ರೀನಿವಾಸಮೂರ್ತಿ ಅವರ ತೃತೀಯ ಪುತ್ರ) |
| 07.04.04 ಮೈಸೂರು (ರಾಮಕೃಷ್ಣನಗರ) | ಶ್ರೀಮತಿ ಆಶಾ ಮತ್ತು ಶ್ರೀ ಹೆಚ್.ಎಸ್. ಅನಂತಪದ್ಮನಾಭ |

## ಉಪನಯನ

| ತಾರೀಖು | ವಟುವಿನ ಹೆಸರು |
|---|---|
| 09.02.04 ಕುಶಾಲನಗರ | ನಿಖಿಲ್ ನರಸಿಂಹ ಹರವೆ (ಶ್ರೀಮತಿ ಸುಮಿತ್ರ ಮತ್ತು ಶ್ರೀ ನಾಗರಾಜ ಹರವೆ ಅವರ ಪುತ್ರ) |
| 26.03.04 ಬೆಂಗಳೂರು | ಕೃಷ್ಣಮೂರ್ತಿ ಕಾರ್ತಿಕ್ (ಶ್ರೀಮತಿ ಕುಮುದಿನಿ ಮತ್ತು ಶ್ರೀ ಆರ್. ಕೆ. ಕುಮಾರ್ ಅವರ ಪುತ್ರ) |

## ವಿವಾಹ ಮಹೋತ್ಸವ

01.02.04 ಬೆಂಗಳೂರು — ಚಿ|| ಸೌ|| ಉಮಾ ಎಸ್. (ಶ್ರೀಮತಿ ಇಂದು ಮತ್ತು ಶ್ರೀ ಬಿ. ಸತ್ಯೇಂದ್ರ ಇವರ ಪುತ್ರಿ) ಮತ್ತು ಚಿ|| ರಾ|| ಬಿ. ಆರ್. ಪ್ರವೀಣ ಕುಮಾರ್ (ಶ್ರೀಮತಿ ಪದ್ಮಜ ಮತ್ತು ಶ್ರೀ ಬಿ.ಎಸ್. ರಾಮನಾಥ್ ಇವರ ಪುತ್ರ)





## ಪುರಂದರ-ತ್ಯಾಗರಾಜರ ಆರಾಧನೆ

28.03.04 ಬೆಂಗಳೂರು — ಶ್ರೀಮದ್ವಾದಿರಾಜ ಆರಾಧನಾ ಟ್ರಸ್ಟ್(ರಿ.) ಮತ್ತು ಶ್ರೀ ಶಾರದಾ ಕಲಾ ಕೇಂದ್ರಗಳ ವತಿಯಿಂದ ''ಶಿವಾರ್ಚನ'' - ಎಂಬ ಕ್ಯಾಸೆಟ್ ಮತ್ತು ಪುಸ್ತಕಗಳ ಬಿಡುಗಡೆ ಮೂಲಕ ಆರಾಧನೆಯನ್ನು ಆಚರಿಸಲಾಯಿತು. ಇದು ಗಾನಕಲಾಭೂಷಣ ಆರ್. ಕೆ. ಪದ್ಮನಾಭ ವಿರಚಿತ ಶಿವನಾಮ ರಾಗಗಳ ಆಧರಿತವಾದ ರಚನೆಗಳನ್ನು ಒಳಗೊಂಡಿದೆ. ಧ್ವನಿ ಸುರುಳಿಯನ್ನು ಬಿಡುಗಡೆ ಮಾಡಿದವರು ಸಂಗೀತ ಕಲಾರತ್ನ ಎಸ್. ಕೃಷ್ಣಮೂರ್ತಿಯವರು. ಇದಾದ ನಂತರ ಕು|| ಮಾನಸಿ ಪ್ರಸಾದ್ ಅವರಿಂದ ಹಾಡುಗಾರಿಕೆ ಇತ್ತು.

## ಸನ್ಮಾನ

15.03.04 ಬೆಂಗಳೂರು — ಮೈಕೊ ಲಲಿತಕಲಾ ಸಂಘದ ವತಿಯಿಂದ ಮೂರು ದಿನಗಳು ನಡೆದ 'ಸುರಸಂಗಮ-2004' ಸಂಗೀತ ಸಂಜೆಯಲ್ಲಿ ನಮ್ಮ ಬಂಧುಗಳಾದ ವೇಣುಗಾನ ವಿಶಾರದ ಬಿ. ಜಿ. ಶ್ರೀನಿವಾಸ್ (ಪಾಪು) ಅವರನ್ನು ಸನ್ಮಾನಿಸಲಾಯಿತು.

## ಮಾರ್ಚ್ ತಿಂಗಳಲ್ಲಿ ಸಂಘಕ್ಕೆ ಬಂದ ಕೊಡುಗೆಗಳು :

### ಆಜೀವ ಸದಸ್ಯತ್ವ (100 ರೂ.ಗಳು)

| ಹೆಸರು | ಊರು | ರ. ನಂ. | ಆ.ಸ.ಸಂ. |
|---|---|---|---|
| ಎಂ.ಎಲ್.ಎಸ್. ಶಾಸ್ತ್ರಿ | ಬೆಂಗಳೂರು | 6823 | 1807 |

### ಸಭಾ ತಾಂಬೂಲಗಳು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಡಿ. ರಾಮನಾಥ್ | ಬೆಂಗಳೂರು | 6815 | 100.00 (ಗೃಹಪ್ರವೇಶ) |
| ಎಸ್.ಆರ್.ಶ್ರೀನಿವಾಸಮೂರ್ತಿ | ಬೆಂಗಳೂರು | 6816 | 51.00 (ಗೃಹಪ್ರವೇಶ) |
| ಆರ್.ಎಸ್. ಶ್ರೀನಿವಾಸ | ಬೆಂಗಳೂರು | 6817 | 101.00(ಮಗನ ಉಪನಯನ) |

| | | | |
|---|---|---|---|
| ಬಿ.ಎಸ್.ಮುರಳೀಧರ್ | ಬೆಂಗಳೂರು | 6822 | 50.00 (ಷಷ್ಟ್ಯಬ್ದಿಪೂರ್ತಿ) |
| ಆರ್. ಕೆ. ಕುಮಾರ್ | ಬೆಂಗಳೂರು | 6831 | 150.00(ಮಗನ ಉಪನಯನ) |
| ಪಿ.ವಿ. ಪಟ್ಟಾಭಿ ಮತ್ತು ರಶ್ಮಿ ರೇಖಾ | ಬೆಂಗಳೂರು | 5599 | 100.00 (ಗೃಹಪ್ರವೇಶ) |

## ವಾರ್ತಾ / ಜಾಹೀರಾತು ಫಂಡ್ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಮ್ಯಾಕ್‌ವೆಲ್ ಪಾರ್ಟ್ಸ್ | ಬೆಂಗಳೂರು | 6825 | 2,400.00 |
| ಸುದರ್ಶನ್ ಎಲೆಕ್ಟ್ರಾನಿಕ್ಸ್ | ಬೆಂಗಳೂರು | 6819 | 1,200.00 |
| ಮೇಘನ ಕಂಪ್ಯೂಟರ್ಸ್ | ಬೆಂಗಳೂರು | 6832 | 100.00 |

## ಹಾಸ್ಟೆಲ್ ಅನ್ನದಾನಕ್ಕೆ ಬಂದ ಕೊಡುಗೆಗಳು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಹೆಚ್.ಎಸ್.ಪುರುಷೋತ್ತಮ್ | ಬೆಂಗಳೂರು | 6828 | 4,000.00 (ತಾಯಿಯ ನೆನಪು) |
| ಹೆಚ್.ಎಸ್.ಪುರುಷೋತ್ತಮ್ | ಬೆಂಗಳೂರು | 6829 | 4,00.00 (ತಂದೆಯ ನೆನಪು) |

## ವಿದ್ಯಾರ್ಥಿ ವೇತನ ನಿಧಿ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಪಿ. ಶಾಮರಾವ್ ಕಶ್ಯಪ್ ಛಾರಿಟಬಲ್ ಟ್ರಸ್ಟ್ | ಬೆಂಗಳೂರು | 6830 | 7,000.00 |

## ಸಾಲರೂಪ ವಿದ್ಯಾರ್ಥಿ ವೇತನದ ಮರುಪಾವತಿ

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಬಿ.ಜಿ. ಕಿರಣ್ | ಬೆಂಗಳೂರು | 6821 | 1,000.00 |
| ಎಂ.ಜಿ. ಆನಂದ್ | ಮೈಸೂರು | 6826 | 3,000.00 |





## ವೃದ್ಧಾಶ್ರಮ ನಿಧಿ

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಶಾರದಾರಾವ್ | ಬೆಂಗಳೂರು | 6827 | 10,000.00 |

## ವಾರ್ತಾ ಪೋಷಕರು / ಮಹಾ ಪೋಷಕರು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಬಿ.ವಿ.ಗೋಪಾಲಕೃಷ್ಣಯ್ಯ | ಬೆಂಗಳೂರು | 6824 | 1,000.00 |
| ಹೆಚ್.ವಿ. ನಟರಾಜ | ಬೆಂಗಳೂರು | 5600 | 1,000.00 |
| ಭಾಸ್ಕರ್ ಇಂಡಸ್ಟ್ರೀಸ್ | ಬೆಂಗಳೂರು | 5593 | 5,000.00 |

(ಮಾರ್ಚ್ ತಿಂಗಳ ಸಂಚಿಕೆಯಲ್ಲಿ ಈ ಹೆಸರು ಎಸ್. ಎನ್. ಅನಂತಶ್ರೀನಿವಾಸ ಎಂದು ತಪ್ಪಾಗಿ ಅಚ್ಚಾಗಿತ್ತು. ಇದಕ್ಕಾಗಿ ವಿಷಾದಿಸುತ್ತೇವೆ.)

### ಪ್ರಾಯೋಜನೆ

ಶ್ರೀಮತಿ ಸುಭದ್ರಾ ವೆಂಕಟರಾಮ್ ಅವರು ನಮ್ಮ ವಿದ್ಯಾರ್ಥಿ ನಿಲಯದಲ್ಲಿರುವ, ಸಂಸ್ಕೃತ ಮಹಾ ವಿದ್ಯಾಲಯದಲ್ಲಿ ಓದುತ್ತಿರುವ, ಒಬ್ಬ ಬಡ ವಿದ್ಯಾರ್ಥಿಯ ಕೊಠಡಿಯ ವಾರ್ಷಿಕ ಮೊಬಲಗನ್ನು (ರೂ. 1,800/-) ಪ್ರಾಯೋಜಿಸಿದ್ದಾರೆ. ಇದಕ್ಕಾಗಿ ಸಂಘವು ಆಭಾರಿಯಾಗಿದೆ. (ರ.ಸಂ. 6820)

## ಮಾರ್ಚ್ ತಿಂಗಳಲ್ಲಿ ನಡೆದ ಹಾಸ್ಟೆಲ್ ಅನ್ನದಾನ ಸೇವಾ :

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 04.02.04 ಕೆ.ಜಿ.ಎಫ್. | ಹೆಚ್.ಎಸ್. ಸುಬ್ಬರಾವ್<br>ಎಸ್. ಪ್ರಕಾಶ್<br>ಉಷಾ ನರಸಿಂಹನ್ | ತಾಯಿ ಸುಭದ್ರಮ್ಮ |
| 13.02.04 ಕೆ.ಜಿ.ಎಫ್. | ಹೆಚ್.ಎಸ್. ಸುಬ್ಬರಾವ್<br>ಎಸ್. ಪ್ರಕಾಶ್<br>ಉಷಾ ನರಸಿಂಹನ್ | ತಂದೆ ಹೆಚ್. ಎಸ್. ಶ್ರೀನಿವಾಸನ್ |

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 01.03.04 ಬೆಂಗಳೂರು | ಅನಸೂಯರಾವ್ | ತಂದೆ ಎಸ್. ಸುಬ್ಬರಾವ್ |
| 01.03.04 ಮುಂಬಯಿ | ಸಾವಿತ್ರಿ ಎನ್. ಸ್ವಾಮಿ | ಮೂರು ದಿವಸಗಳು |
| 02.03.04 ಬೆಂಗಳೂರು | ಹೇಮಲತಾ, ಶ್ರೀವತ್ಸನ್, ನಟರಾಜ್, ಶ್ರೀಧರ್ | ತಾಯಿ ಜಯಮ್ಮ ಕೃಷ್ಣಪ್ಪ |
| 08.03.04 ಬೆಂಗಳೂರು | ಕೆ. ವಿ. ಸುಬ್ಬರಾವ್ ಮತ್ತು ಸರಸ್ವತಮ್ಮ | ತಂದೆ ಕಟ್ಟೇಪುರ ಎಸ್. ವೆಂಕಟರಾಮಯ್ಯ |
| 09.03.04 ಬೆಂಗಳೂರು | ಎ.ಎಸ್. ನೀಲಕಂಠನ್ | ಪತ್ನಿ ಆರ್.ಎನ್.ಶಾಂತ |
| 09.03.04 ಬೆಂಗಳೂರು | ಬಿ.ವಿ. ವೆಂಕಟೇಶ್ | ತಾಯಿ ಲಕ್ಷ್ಮೀದೇವಮ್ಮ |
| 10.03.04 ಬೆಂಗಳೂರು | ಶಕುಂತಲಾ ವೆಂಕಟಕೃಷ್ಣಪ್ಪ | ಅಕ್ಕ ಯಶೋದಾ ಸುಬ್ರಹ್ಮಣ್ಯ |
| 13.03.04 ವಾರಣಾಸಿ | ಶ್ರೀಕಂಠ ಆರ್, ಎಸ್. ಸುವರ್ಣ ಭಾರತಿ | ತಂದೆ ರುದ್ರಪಟ್ಟಣ ಒಂಟಿ ಶ್ರೀನಿವಾಸಯ್ಯ |
| 12.03.04 ಮುಂಬಯಿ | ಆರ್.ವಿ. ಕೃಷ್ಣಮೂರ್ತಿ | ದೇವನೂರು ಲಕ್ಷ್ಮೀಕಾಂತ ಸ್ವಾಮಿ |
| 15.03.04 ಮುಂಬಯಿ | ಆರ್.ವಿ. ಕೃಷ್ಣಮೂರ್ತಿ | ಅಜ್ಜ ಸಣ್ಣತೊಟ್ಟಿ ಲಕ್ಷ್ಮೀಕಾಂತಯ್ಯ |
| 15.03.04 ಬೆಂಗಳೂರು | ನಿರ್ಮಲಾ ಗದ್ವಾಲ್ ನಾಗೇಂದ್ರ ಮತ್ತು ಶ್ರೀಲಕ್ಷ್ಮಿ | ಹೆಚ್.ಎಸ್.ಕೃಷ್ಣಸ್ವಾಮಿ |
| 15.03.04 ಮೈಸೂರು | ಎಸ್.ಆರ್. ಕೃಷ್ಣಪ್ಪ | ತಂದೆ ಎಸ್.ಕೆ. ರಾಮ ಸ್ವಾಮಯ್ಯನವರ ಹುಟ್ಟುಹಬ್ಬ |





| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 17.03.04 ಬೆಂಗಳೂರು | ಲಕ್ಷ್ಮಮ್ಮ | ಪತಿ ಆರ್. ವಿ. ಸೂರ್ಯ ನಾರಾಯಣರಾವ್ |
| 17.03.04 ಬೆಂಗಳೂರು | ಆರ್.ಕೆ. ಚಂದ್ರಹಾಸ | ತಂದೆ ಎಸ್. ಕೃಷ್ಣಪ್ಪ |
| 19.03.04 ಮುಂಬಯಿ | ಹೆಚ್.ಆರ್.ಹರಿಹರನ್ | ತಂದೆ ರಾಮಸ್ವಾಮಿ |
| 20.03.04 ವಾರಣಾಸಿ | ಶ್ರೀಕಂಠ ಆರ್, ಎಸ್. ಸುವರ್ಣ ಭಾರತಿ | ತಾಯಿ ಲಕ್ಷ್ಮಮ್ಮ ಶ್ರೀನಿವಾಸಯ್ಯ |
| 21.03.04 ಯು.ಎಸ್.ಎ. | ಶ್ರೀಮತಿ ವೈದೇಹಿ ಮತ್ತು ಶ್ರೀ ಶಿವಶಂಕರ | ಪುತ್ರ ರಾಮ್ ಶಿವಶಂಕರ್ ಹುಟ್ಟುಹಬ್ಬ |
| 21.03.04 ಮೈಸೂರು | ಬೆಟ್ಟದಪುರ ಸಂಕೇತಿ ಮಂಗಳ ಕಾರ್ಯ ಸಮಿತಿ | ಯುಗಾದಿ ಹಬ್ಬ |
| 23.03.04 ಪುಣೆ | ಆರ್.ಎಸ್.ಕೃಷ್ಣಮೂರ್ತಿ | ತಂದೆ ರುದ್ರಪಟ್ಟಣ ಒಂಟಿ ಶ್ರೀನಿವಾಸಯ್ಯ |
| 26.03.04 ಬೆಂಗಳೂರು | ಹೆಚ್.ಎಸ್.ಜಯಪ್ರಕಾಶ್ | ತಂದೆ ಹೆಚ್.ಜೆ. ಸುಬ್ರಹ್ಮಣ್ಯ |
| 29.03.04 ಬೆಂಗಳೂರು | ಹೆಚ್.ಎಸ್. ಪ್ರಭಾಕರ | ತಂದೆ ಹೆಚ್.ವಿ. ಸುಬ್ರಹ್ಮಣ್ಯ |
| 30.03.04 ಬೆಂಗಳೂರು | ಎಂ.ಎನ್.ವೆಂಕಟರಾಮಯ್ಯ | ಅವರದೇ ಹುಟ್ಟುಹಬ್ಬ |
| 31.03.04 ಪುಣೆ | ಆರ್.ಎಸ್.ಕೃಷ್ಣಮೂರ್ತಿ | ತಾಯಿ ಲಕ್ಷ್ಮಮ್ಮ ಒಂಟಿ ಶ್ರೀನಿವಾಸಯ್ಯ |

# ಆಪತ್ಕಾಲ ಪರಿಹಾರ ನಿಧಿ
# (Distress Relief Fund)

ಅಮೇರಿಕದಲ್ಲಿರುವ ಸಂಕೇತಿ ಮಹನೀಯರುಗಳು ಶ್ರೀ ಬಿ.ಕೆ.ಎಸ್. ಸ್ವಾಮಿಯವರ ನೇತೃತ್ವದಲ್ಲಿ ಉಭಯ ಸಂಕೇತಿಗಳ (ಕೌಶಿಕ ಮತ್ತು ಬೆಟ್ಟದಪುರ) ಅನುಕೂಲಕ್ಕಾಗಿ ಆಪತ್ಕಾಲ ಪರಿಹಾರ ನಿಧಿಯನ್ನು ಸ್ಥಾಪಿಸಿ, ಈ ವರ್ಷಕ್ಕಾಗಿ ಸುಮಾರು 50,000/- ರೂ.ಗಳನ್ನು ಕಳುಹಿಸಿದ್ದಾರೆ.

ಹೆಸರೇ ಸೂಚಿಸುವಂತೆ, ಈ ನಿಧಿಯ ಉದ್ದೇಶ ಆಪತ್ಕಾಲದಲ್ಲಿದ್ದು ಮುಖ್ಯವಾಗಿ ಅನಾರೋಗ್ಯದಿಂದ ನರಳುತ್ತಿರುವ, ಅನುಕೂಲತೆಗಳಿಲ್ಲದಿರುವ ಸಂಕೇತಿ ಬಂಧುಗಳಿಗೆ ಧನ ಸಹಾಯ ಮಾಡುವುದು. ಯಾರೊಬ್ಬರಿಗೆ 10,000/- ರೂ.ಗಳಿಗಿಂತ ಹೆಚ್ಚು ಧನ ಸಹಾಯ ಮಾಡಲಾಗುವುದಿಲ್ಲ.

ಇದರ ಉಪಯೋಗವನ್ನು ಪಡೆಯ ಬಯಸುವವರು ಆಯಾ ಸಂಘದ ಕಾರ್ಯದರ್ಶಿಯವರಿಗೆ, ಪೂರ್ಣ ಮಾಹಿತಿ ಕೊಟ್ಟು, ಇಬ್ಬರು ಸಂಕೇತಿ ಗಣ್ಯರುಗಳಿಂದ ಶಿಫಾರಸ್ಸು ಮಾಡಿಸಿ, ಅರ್ಜಿಯನ್ನು ಕಳುಹಿಸಬೇಕು. ಎರಡೂ ಸಂಘಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಸಭೆ ಸೇರಿ, ಬಂದ ಅರ್ಜಿಗಳ ಬಗ್ಗೆ ಅಂತಿಮ ನಿರ್ಧಾರವನ್ನು ತೆಗೆದುಕೊಂಡು ಸೂಕ್ತ ಧನ ಸಹಾಯವನ್ನು ಮಾಡಲಾಗುತ್ತದೆ.

| | |
|---|---|
| **ಆರ್.ಎಸ್. ಭಾಸ್ಕರ ಅವಧಾನಿ** | **ಸಿ. ಕೆ. ಮಂಜುನಾಥ,** |
| ಕಾರ್ಯದರ್ಶಿ | ಪ್ರಧಾನ ಕಾರ್ಯದರ್ಶಿ |
| ಬೆಟ್ಟದಪುರ ಸಂಕೇತಿ ಸಂಘ | ಕೌಶಿಕ ಸಂಕೇತಿ ಸಂಘ |





# ವಾರ್ತಾ ನಿಧಿ

ಸಂಘದ ಸದಸ್ಯರ ನಡುವೆ ಮುಖ್ಯಸಂಪರ್ಕ ಸೇತುವೆಯಾಗಿರುವ ಸಂಘದ ಚಟುವಟಿಕೆಗಳ ಮುಖವಾಣಿಯಾಗಿರುವ ಬಾಂಧವರ ಪ್ರತಿಭೆಗಳಿಗೆ ಒಂದು ಕನ್ನಡಿಯಂತಿರುವ ನಿಮ್ಮ ‘ಸಂಕೇತಿ ವಾರ್ತಾ’ವನ್ನು ಸದೃಢಗೊಳಿಸಿ, ಗಟ್ಟಿಯಾಗಿ ತನ್ನ ಕಾಲಮೇಲೆ ನಿಲ್ಲುವಂತೆ ಮಾಡುವ ಹೊಣೆ ನಮ್ಮ-ನಿಮ್ಮೆಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ಬಾಂಧವರಿಂದ ಉದಾರ ಕೊಡುಗೆಗಳನ್ನು ನಿರೀಕ್ಷಿಸಲಾಗಿದೆ. ಮಾನ್ಯ ಬಾಂಧವರು ತಮ್ಮ ಉದಾರ ಮನಸ್ಸಿನ ಕೊಡುಗೆಗಳನ್ನು ಅಧಿಕ ಸಂಖ್ಯೆಯಲ್ಲಿ ನೀಡಿ ಈ ಔಚಿತ್ಯಪೂರ್ಣ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಕೋರುತ್ತೇವೆ. ಎರಡು ಪ್ರಕಾರದ ದಾನಿಗಳನ್ನು ಗುರುತಿಸಲಾಗುವುದು.

**ರೂ. 5,000/- ಕೊಡುಗೆ ನೀಡುವವರು**
**ಮಹಾಪೋಷಕರು**

**ರೂ. 1,000/- ಕೊಡುಗೆ ನೀಡುವವರು**
**ಪೋಷಕರು**

ದಾನಿಗಳ ಹೆಸರುಗಳನ್ನು ಪ್ರತಿ ತಿಂಗಳೂ ‘ವಾರ್ತಾ’ದಲ್ಲಿ ಪ್ರಕಟಿಸಲಾಗುವುದು.

ನಮ್ಮ ಕರೆಗೆ ಓಗೊಟ್ಟು ಈ ತಿಂಗಳು ಸ್ಪಂದಿಸಿದ ಮಾನ್ಯ ಬಾಂಧವರು

| | |
|---|---|
| **ಭಾಸ್ಕರ್ ಇಂಡಸ್ಟ್ರೀಸ್** | ಮಹಾಪೋಷಕರು |
| **ಬಿ. ವಿ. ಗೋಪಾಲಕೃಷ್ಣಯ್ಯ** | ಪೋಷಕರು |
| **ಹೆಚ್. ವಿ. ನಟರಾಜ** | ಪೋಷಕರು |

## ಸಮಾಚಾರ ಸಂಗ್ರಹ

**ನೀಗಿಸಲಾರದ ವೈದ್ಯರ ಭ್ರಷ್ಟತೆ** (01 ಫೆಬ್ರವರಿ, 04) ಬೆಂಗಳೂರು

ಆರೋಗ್ಯ ಸೇವಾ ಕ್ಷೇತ್ರದಲ್ಲೂ ಭ್ರಷ್ಟಾಚಾರ ಮೆರೆಯುತ್ತಿರುವುದರಿಂದ ಅಲ್ಲಿಸೇವಾ ಮನೋಭಾವ ಹೊರಟುಹೋಗಿ ''ದುಡ್ಡು ಹೊಡೆಯುವ'' ಗೀಳು ಹತ್ತಿಕೊಂಡಿದೆ. ಲೋಕಾಯುಕ್ತ ಜಾಗ್ರತ ದಳದ ನಿರ್ದೇಶಕ ಡಾ|| ಹೆಚ್. ಸುದರ್ಶನ್ ಅವರು ಸಲಹೆಯೊಂದನ್ನು ಮಾಡಿದ್ದಾರೆ.

ಡಾಕ್ಟರ್‌ಗೆ ಕೆಲಸ ಮಾಡುವ ಆಸ್ಪತ್ರೆಯಲ್ಲೇ ಕೆಲಸದ ಅವಧಿ ಮುಗಿದ ಮೇಲೆ ಖಾಸಗಿ ಪ್ರಾ ್ಯಕ್ಟೀಸ್ ಮಾಡಲು ಅವಕಾಶ ಕಲ್ಪಿಸಿಕೊಟ್ಟರೆ, ಅವರ ಆದಾಯ ಹೆಚ್ಚಿ ಭ್ರಷ್ಟಾಚಾರವನ್ನು ಕಡಿಮೆಗೊಳಿಸಬಹುದೆಂದು ಡಾ|| ಸುದರ್ಶನ್ ಅವರ ಭಾವನೆ! ಆದರೆ ಹಾಗಾಗಲು ಸಾಧ್ಯವೇ ಇಲ್ಲ, ಏಕೆಂದರೆ ಕೆಲಸದ ಅವಧಿಯಲ್ಲಿ ರೋಗಿಗಳು ಚಿಕಿತ್ಸೆಗೆ ಬಂದಾಗ 5 ಗಂಟೆಯ ನಂತರ ಬರುವಂತೆ ಡಾಕ್ಟರ್ ಹೇಳುತ್ತಾನೆ. ಆಗ ಡ್ಯೂಟಿ ಟೈಂ ಎನ್ನುವುದು ಬುಕ್ಕಿಂಗ್ ಟೈಂ ಆಗುವಂತೆ ಸರ್ಕಾರವೇ ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ! ಅಷ್ಟೇ ಅಲ್ಲದೆ ಆಸ್ಪತ್ರೆಯ ಸೌಲಭ್ಯಗಳು / ಔಷಧಿಗಳು ಡಾಕ್ಟರ್ ದುಡ್ಡು ಮಾಡಲು ಸಾಧನಗಳಾಗುತ್ತವೆ. ಸರ್ಕಾರಿ ಡಾಕ್ಟರ್‌ಗಳು ಸೇವೆ ಸಲ್ಲಿಸಲು ಇರುವ ಅಡಚಣೆಗಳನ್ನು ನಿವಾರಿಸುವುದು, ಅಗತ್ಯವಾದ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಳ್ಳುವುದರಿಂದ, ಅವರ ಸಂಬಳ ಹೆಚ್ಚು ಮಾಡುವುದರಿಂದ ಭ್ರಷ್ಟಾಚಾರವನ್ನು ಕಡಿಮೆ ಮಾಡಬಹುದು.





**ರೈತರ ''ಸ್ವಾಮಿ'' ಇನ್ನಿಲ್ಲ** (04 ಫೆಬ್ರವರಿ, 04)

ತೆಂಗಿಗೆ ನುಸಿ, ಬಾಳೆಗೆ ಬೆಂಕಿ ರೋಗ, ಅಡಿಕೆಗೆ ಬಸವನ ಹುಳು, ಸೂರ್ಯಕಾಂತಿಗೆ ಕುದುರೆ ಹುಳು, ಬತ್ತಕ್ಕೆ ಕಂದು ಜಿಗಿ ಹುಳು, ಗೋಧಿಯಲ್ಲಿ ಪಾರ್ಥೇನಿಯಂ..... ಇವೆಲ್ಲಾ ನಮ್ಮಜ್ಜನ ಕಾಲದಲ್ಲಿ ಇರಲಿಲ್ಲ, ಈಗ ಎಲ್ಲಿಂದ ಬಂತು ಎಂದು ಯೋಚನೆ ಮಾಡಿದ್ದೀರಾ ? ಎಂದು ಕೇಳುತ್ತಿದ್ದ ರೈತ ಸಂಘದ ಕ್ರಾಂತಿವೀರ ನಂಜುಂಡಸ್ವಾಮಿ ಇನ್ನಿಲ್ಲ. ವಿದೇಶೀ ಬಂಡವಾಳಗಾರರು ನಮ್ಮ ರೈತರನ್ನು ಹಾಳು ಮಾಡಿ, ಔಷಧಗಳನ್ನು ಮಾರುವ ನೆಪದಲ್ಲಿ ಲೂಟಿ ಮಾಡುವುದೇ ಇದರ ನಿಜವಾದ ಉದ್ದೇಶ ಎನ್ನುತ್ತಾ ರೈತರನ್ನು ಒಗ್ಗೂಡಿಸುತ್ತಿದ್ದರು. ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಮಹಂತದೇವರು - ರಾಜಮ್ಮಣ್ಣಿಯವರ ಮಗನಾಗಿ 2 ಮೇ 1935ರಲ್ಲಿ ಹುಟ್ಟಿದ ನಂಜುಂಡಸ್ವಾಮಿ ಬಾಲ್ಯದಿಂದಲೂ ಪ್ರತಿಭಾನ್ವಿತ ವಿದ್ಯಾರ್ಥಿಯಾಗಿದ್ದರು. ಮೈಸೂರಿನಲ್ಲಿ ಬಿ.ಎಸ್ಸಿ - ಎಲ್.ಎಲ್.ಬಿ. ಓದಿದನಂತರ ಕಾನೂನಿನಲ್ಲಿ ಸ್ನಾತಕೋತ್ತರ ಪದವಿಯನ್ನು ಧಾರವಾಡದಲ್ಲಿ ಪಡೆದರು. ಜರ್ಮನಿ - ಫ್ರಾನ್ಸ್‌ಗಳಲ್ಲಿ ಉನ್ನತ ಶಿಕ್ಷಣವನ್ನು ಪಡೆದರು. ಜರ್ಮನಿಯಲ್ಲಿ ಡಾಕ್ಟರೇಟ್ ಪಡೆದರು. ಬೆಂಗಳೂರಿನಲ್ಲಿ ಕಾನೂನು ಪ್ರೊಫೆಸರ್ ಆಗಿ ಸೇವೆ ಸಲ್ಲಿಸಲು ಪ್ರಾರಂಭಿಸಿದರು. ನಂತರ 1980ರಲ್ಲಿ ರೈತರಿಗೆ ಆಗುವ ಅನ್ಯಾಯವನ್ನು ಕಂಡು ಅವರಿಗೆ ಮಾರ್ಗದರ್ಶನ ಮಾಡಬೇಕೆನ್ನುವ ನಿರ್ಧಾರದಿಂದ ರೈತ ಸಂಘವನ್ನು ಕಟ್ಟಿದರು. ಅವರ ಮಾತು ಎಷ್ಟರಮಟ್ಟಿಗೆ ಉಗ್ರವಾಗಿರುತ್ತಿತ್ತೆಂದರೆ ಅವರಿಗೆ ವೀರಪ್ಪನ್ ಕೂಡ ಪ್ರಾಣ ಬೆದರಿಕೆ ಒಡ್ಡಿದ್ದ! ಅವರ ಮಾತುಗಾರಿಕೆ ಎಂಥವರನ್ನೂ ಸೆಳೆಯುವಂಥದ್ದು. ಪ್ರೇಕ್ಷಕರು ಚಪ್ಪಾಳೆ ತಟ್ಟಿದರೆ ಅವರಿಗೆ ವಿಪರೀತ ಕೋಪ ''ಚಪ್ಪಾಳೆ ತಟ್ಟಿಸಿಕೊಳ್ಳುವ ಪುಡಾರಿ ನಾನಲ್ಲ ನಿಮಗೆ ಸರಿಯಾಗಿ ಅರ್ಥವಾದರೆ ಸಾಕು'' ಎನ್ನುತ್ತಿದ್ದರು.

''ಇಂದು ರೈತರ ಮಕ್ಕಳೇ ಸರ್ಕಾರದ ಅಧಿಕಾರಿಗಳಾಗಿದ್ದಾರೆ. ನಿಮಗೆ ಅನ್ಯಾಯವಾದಾಗ ಸಹಿಸಬೇಡಿ. 'ನೀನು ರೈತನ ಮಗ ಅಲ್ಲವಾ ?' ಅಂತ ದಬಾಯಿಸಿ ಕಾಲರ್‌ಪಟ್ಟಿಹಿಡಿಯಿರಿ'' ಎಂದು ರೈತರನ್ನು ಹುರಿದುಂಬಿಸುತ್ತಿದ್ದರು. ಉಗ್ರ ಪ್ರತಿಭಟನೆಯ ಉಸ್ತುವಾರಿಯನ್ನು ವಹಿಸಿಕೊಂಡಿದ್ದ ಅವರು ಕೆಂಟಕೀ ಮಾನ್ಸಂಟೋ - ಡಂಕಲ್ ಕಂಪನಿಗಳ ವಿರುದ್ಧ ಸಮರವನ್ನೇ ಸಾರಿದರು. ಭಾರತೀಯ ವ್ಯವಸಾಯ ಪದ್ಧತಿಯ ಬಗ್ಗೆ ತೀವ್ರ ಕಾಳಜಿಯನ್ನು ಹೊಂದಿದ್ದ ಅವರು, ಚಾಮರಾಜನಗರದಲ್ಲಿ ಅಂತರರಾಷ್ಟ್ರ ಮಟ್ಟದಲ್ಲಿ ತಿಳುವಳಿಕೆ ಕೊಡಬೇಕೆನ್ನುವ ಉದ್ದೇಶದಿಂದ ''ಅಮೃತ ಭೂಮಿ''ಯನ್ನು ಸ್ಥಾಪಿಸಿದರು. ರೈತರಿಗೆ ಹಸಿರು ಟವಲ್‌ನ ಯೂನಿಫಾರಂ ನೀಡಿದರು. ರೈತ ಸಮುದಾಯವು ತನ್ನ ಹಿತಕ್ಕಾಗಿ ಹೋರಾಡುವ ಒಬ್ಬ ವಿದ್ಯಾವಂತನನ್ನು ಕಳೆದುಕೊಂಡು ಅನಾಥವಾಗಿದೆ.

**- ಬಿ.ಎಸ್. ಸತೀಶ್**

## ಶ್ರದ್ಧಾಂಜಲಿ

| | |
|---|---|
| 20.03.04<br>ಬೆಂಗಳೂರು | ಶ್ರೀ ಎಸ್. ಕೆ. ನಾರಾಯಣರಾವ್ 96 ವರ್ಷ,<br>ಆತ್ರೇಯ ಗೋತ್ರ |
| 03.04.04.<br>ಬೆಂಗಳೂರು | ಶ್ರೀ ಹೆಚ್. ಎಸ್. ಗಂಗಾಧರ, 87 ವರ್ಷ,<br>ಸಂಕೃತಿ ಗೋತ್ರ |

ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸಲು ಧೈರ್ಯ, ಸ್ಥೈರ್ಯಗಳನ್ನು ಭಗವಂತನು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.







ಶ್ರೀ ಎಸ್. ಕೆ. ನಾರಾಯಣರಾಯರು

# ಹೃದಯ ಶ್ರೀಮಂತಿಕೆಯ ಗಣಿ ಸಾಹುಕಾರ್ ನಾರಾಯಣರಾಯರು

ಶ್ರೀ ಸಾಹುಕಾರ್ ಕೃಷ್ಣಪ್ಪ ಮತ್ತು ಶ್ರೀಮತಿ ಬಾಲಾಂಬ ದಂಪತಿಗಳ ಎರಡನೇ ಪುತ್ರರಾಗಿ ಸಾಲಿಗ್ರಾಮದಲ್ಲಿ ತಾ|| 01.05.1909ರಂದು ಎಸ್. ಕೆ. ನಾರಾಯಣರಾಯರು ಜನಿಸಿದರು. ಬಾಲ್ಯದಿಂದಲೂ ಸ್ನೇಹಜೀವಿಯಾಗಿ, ಸಂಘಜೀವಿಯಾಗಿದ್ದ ನಾರಾಯಣರಾಯರು ಮುಂದೆ ಸಂಕೇತಿ ಸಂಘದ ಚಟುವಟಿಕೆಗಳಲ್ಲಿ ಹೆಚ್ಚಿನ ರೀತಿಯಲ್ಲಿ ತೊಡಗಿಸಿಕೊಂಡವರು. ಸಂಘಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸಂಕೇತಿ ಬಾಂಧವರನ್ನು ಸದಸ್ಯರನ್ನಾಗಿಸುವತ್ತ ಶ್ರೀಯುತರು ವಿಶೇಷವಾಗಿ ಶ್ರಮಿಸಿದರು. ಆಗ ಸಂಘದ ಕಾರ್ಯದರ್ಶಿಯಾಗಿದ್ದ ದಿವಂಗತರು ಅಂದಿನ ಉಪಾಧ್ಯಕ್ಷರಾಗಿದ್ದ ದಿ|| ಆರ್.ಎಸ್.ವಿ. ಅವಧಾನಿ ಅವರೊಡನೆ ಮುಂಬೈಗೆ ತೆರಳಿ ಅಲ್ಲಿ ಹಲವು ದಿಕ್ಕುಗಳಲ್ಲಿ ಹರಡಿಹೋಗಿದ್ದ ಸಂಕೇತಿಗಳನ್ನು ಸಂಪರ್ಕಿಸಿ ಅವರಿಂದ ಸದಸ್ಯತ್ವ ಸ್ವೀಕಾರ ಹಾಗೂ ಕೊಡುಗೆಗಳನ್ನು ಸಂಘಕ್ಕಾಗಿ ಪಡೆದುಕೊಳ್ಳುವಲ್ಲಿ ಬಹಳ ಶ್ರಮಿಸಿದರು. ಮುಖ್ಯವಾಗಿ ಸಂಘದ ಸ್ವರ್ಣಜಯಂತಿ ಸಮಾರಂಭದ ಸಂದರ್ಭದಲ್ಲಿ ಅದರ ಯಶಸ್ಸಿಗೆ ಅಪಾರವಾಗಿ ದುಡಿದ ಕೀರ್ತಿ ದಿವಂಗತರದು.

ಇವುಗಳೆಲ್ಲಕ್ಕಿಂತ ಪ್ರಮುಖವಾದುದು 'ಖಾಂಡ್ವಾ'. ಬಹುಮಟ್ಟಿಗೆ ಖಾಂಡ್ವಾ ಮತ್ತು ನಾರಾಯಣರಾಯರು - ಎರಡೂ ಪರ್ಯಾಯವೆಂಬಂತಾಗಿತ್ತು. ಸಂಘಕ್ಕೆ ಭಾರೀ ಮೊತ್ತದ ಧನಸಂಗ್ರಹವಾಗಲು ಅವಿರತವಾಗಿ ಓಡಾಡಿದವರು ನಾರಾಯಣರಾಯರು. ಇಳಿವಯಸ್ಸಿನಲ್ಲಿಯೂ ಅತೀ ಉತ್ಸಾಹದಿಂದ ಸ್ವಾರ್ಥದ ಕಿಂಚಿತ್ತೂ ಗೊಡವೆಯಿಲ್ಲದೆ ದುಡಿದ ಇವರ ಪರಿ ಬಾಂಧವರಾದ ಶ್ರೀ ಬಿ. ಕೆ. ಚಂದ್ರಶೇಖರ್ ಅವರು ಉಚಿತವಾಗಿ ಕಾನೂನು ಸಲಹೆ ನೀಡಲು ಪ್ರಭಾವ ಬೀರಿತು. 'ಖಾಂಡ್ವಾ' ದಿಂದ ದೊರಕಿದ ಧನದಿಂದ ಅನೇಕ ಕಾರ್ಯಕ್ರಮಗಳ ಜತೆಗೆ ಬೆಟ್ಟದಪುರದಲ್ಲಿ ವರ್ಷದಲ್ಲಿ ಒಂದು ಬಾರಿ ಅನ್ನಸಂತರ್ಪಣೆ, ವೈದ್ಯಕೀಯ ಸಹಾಯ ನಿಧಿಗೆ ಕೊಡುಗೆ ಮುಂತಾದ ಜನೋಪಯೋಗಿ ಕಾರ್ಯಗಳು ನಾರಾಯಣರಾಯರ ಓಡಾಟದ ಫಲಶ್ರುತಿಯಾಗಿವೆ.

ದಿವಂಗತರು ನಾಲ್ಕು ಗಂಡುಮಕ್ಕಳು ಮತ್ತು ಒಬ್ಬ ಪುತ್ರಿಯನ್ನು ಅಗಲಿದ್ದಾರೆ. ಸರಳತೆ, ಸಜ್ಜನಿಕೆ, ಸ್ನೇಹಭಾವ, ಸೇವಾಮನೋಭಾವಗಳಿಂದ ಸಹೃದಯರಲ್ಲಿ ಸದಾ ಸಂತೋಷ ಸಿಂಚನಗೈಯುತ್ತಿದ್ದ ಸಾಹುಕಾರ್ ನಾರಾಯಣರಾಯರು 20.03.2004ರಂದು 95 ಸಾರ್ಥಕ ಸಂವತ್ಸರಗಳ ನಂತರ ಸ್ವರ್ಗಸ್ಥರಾದರು. ದಿವಂಗತರ ಆತ್ಮಕ್ಕೆ ಇದೋ ನಮ್ಮ ನಮನ.

## ಪ್ರತಿಭೆ



ಕು|| ಪೃಥುಲಾ ಎಸ್. (ಸಿಂಧು), 2003ನೇ ಸಾಲಿಗಾಗಿ ಚಿತ್ರದುರ್ಗದ ಸಿರಿಗನ್ನಡ ಪ್ರಕಾಶನದಿಂದ ನಡೆದ ತೃತೀಯ ಕನ್ನಡ ಪ್ರತಿಭಾ ಪರೀಕ್ಷೆಯಲ್ಲಿ ರಾಜ್ಯ ಮಟ್ಟದಲ್ಲಿ 8ನೇ ರ್‍ಯಾಂಕ್ ಪಡೆದಿರುತ್ತಾಳೆ.

ತಂದೆ ಆರ್. ಶ್ರೀನಿವಾಸ್, ತಾಯಿ ದಿ|| ನಳಿನಿ ಶ್ರೀನಿವಾಸ್.

ಅಜ್ಜಂದಿರು : ಆರ್.ಸಿ. ರಾಮಸ್ವಾಮಿ, ಡಾ|| ಎಸ್. ಮೋಹನ್‌ರಾಮ್.

ಅಜ್ಜಿಯರು : ವೇದಾ ರಾಮಸ್ವಾಮಿ, ಶಾಂತಾ ಮೋಹನರಾಮ್.

---

Chi S. R. Manjunath Prasad secured 8th Rank in B.E. (Manufacturing Science & Engg.) conducted by VTU. He is a student of BMS College of Engg. He is a good Badminton (Shuttle) player passed Senior Bharata Natyam Dance & is learning Senior Carnatic Classical Music (Vocal)

| | | |
|---|---|---|
| Father | : | S. G. Ramesh |
| Mother | : | Amshumalini M. S. |
| Grand Parents | : | Late M. K. Sankaranarayana & Yeshodamma.<br>Late Sri S. R. Gangadharaiah & Jayalakshamma |

## ಪ್ರಶಸ್ತಿ

ದಿನಾಂಕ 19.03.04 ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಬೆಂಗಳೂರಿನ ವಿಜಯನಗರ ಬಡಾವಣೆಯ ಕನ್ನಡ ಅಭಿವೃದ್ಧಿ ಬಳಗವು ತನ್ನ ವಾರ್ಷಿಕೋತ್ಸವ ನಡೆಸಿ, ನಾಡಿನ ಸಾಹಿತಿ, ಕಲಾವಿದರಿಗೆ ಗೌರವಿಸಿದ ಸಂದರ್ಭದಲ್ಲಿ ನಮ್ಮ ಬಂಧುಗಳಾದ ಡಾ|| ಬಿ. ಆರ್. ಸುಹಾಸ್, ಯುವ ಸಾಹಿತಿ ಇವರಿಗೆ ''ಕುವೆಂಪುಶ್ರೀ'' ಪ್ರಶಸ್ತಿ ನೀಡಿ ಸನ್ಮಾನಿಸಿದೆ. ಇವರು ಖ್ಯಾತ ಸಾಹಿತಿ ಬೆ.ಗೋ. ರಮೇಶ್ ಅವರ ಸುಪುತ್ರರು.

**ಮೂವರಿಗೂ ಸಂಘದ ಅಭಿನಂದನೆಗಳು.**





*With best compliments from :*

# M/s. Darshanika Foundations (R)

**For Rehabilitation of Physically Handicapped and promotion of Rural Development Programmes.**

***Regd. Office :*** No. 83/2, "Arihant", K. R. Road,
Opp. V. V. Puram Science College, Shankarapura,
Bangalore - 560 004. Ph : 080 - 26609491

## 80 - G of I.T. benefits for Donors

Those interested may contact the office

*Secretary* : **Mr. P. Rajendra - 9845437912**
*President* : **Mr. N. V. Krishna Murthy - 9845522660**
*Office* : **080 - 26609491**

For details contact :
**H. K. Satyaprakash**
Social Worker
**Ph : 9886334667**

## ವರ ಬೇಕಾಗಿದ್ದಾನೆ

| | | |
|---|---|---|
| ಗೋತ್ರ | : | ಲೋಹಿತ |
| ನಕ್ಷತ್ರ | : | ಉತ್ತರಾ |
| ವಯಸ್ಸು | : | 22 |
| ಎತ್ತರ | : | 5'7'' |
| ವಿದ್ಯಾರ್ಹತೆ | : | **B.E. Computer Science** |
| ಉದ್ಯೋಗ | : | **Software Engineer** ಮತ್ತು ಸ್ವಂತ ಉದ್ಯೋಗ |
| ನಿರೀಕ್ಷೆ | : | ಬೆಂಗಳೂರಿನಲ್ಲಿರುವ **IIT, IIM, AIIMS** ಪದವೀಧರ |

**ಸಂಪರ್ಕಿಸಿ : 080 – 2328–4834**

# Walking the talk

* **I have two doctors, my left leg and my right.**
**- G.M. Trevelyan**

* **All truly great thoughts are conceived by walking.**
**- Friedrich Nietzsche**

* **If you are seeking creative ideas, go out walking. Angels whisper to a man when he goes for a walk.**
**- Raymond Inmon**

* **My father considered a walk among the mountains as the equivalent of churchgoing.**
**- Aldous Huxley**

* **Don't think you're on the right road just because it's a well - beaten path.**
**- Author unknown**

* **Everywhere is walking distance if you have the time.** **- Steven Wright**

* **People usually consider walking on water or in thin air a miracle. But I think the real miracle is not to walk either on water or in thin air, but to walk on earth. Every day we are engaged in a miracle which we don't even recognise: a blue sky, white clouds, green leaves, the black, curious eyes of a child - our own two eyes. All is a miracle.**
**- Thich Nhat Hanh**

* **All paths lead nowhere, so it is important to choose a path that has heart.**
**- Carlos Castenda**





# ರುದ್ರಪಟ್ಟಣದಲ್ಲಿ ಸಂಗೀತೋತ್ಸವ

| | | |
|---|---|---|
| 22.05.04 ಶನಿವಾರ | ಬೆಳಿಗ್ಗೆ 7 ಗಂಟೆಗೆ | ಕಾವೇರಿ ಪೂಜೆ, ಬಾಗಣ, ಕುಪ್ಪಸ ಸೀರೆಗಳ ಅರ್ಪಣೆ. ಶ್ರೀ ಪ್ರಸನ್ನ ರಾಮೇಶ್ವರ, ಪ್ರಸನ್ನ ಆಂಜನೇಯ, ಚೆನ್ನಕೇಶವ ಸ್ವಾಮಿ ದರ್ಶನ ಪೂಜೆ. |
| | ಬೆಳಿಗ್ಗೆ 10.30ಕ್ಕೆ | ಉದ್ಘಾಟನೆ ಮಾನ್ಯ ಶ್ರೀ ವೈ. ವಿ. ಸುಬ್ರಹ್ಮಣ್ಯರವರಿಂದ |
| | 11-1.30ರವರೆಗೆ | ಶ್ರೀಮತಿ ಎಂ.ಎಸ್. ಶೀಲ ರವರಿಂದ ಹಾಡುಗಾರಿಕೆ |
| | ಸಂಜೆ 4.30ಕ್ಕೆ | ರಂಗೋಲಿ ಸ್ಪರ್ಧೆ, ವೀಕ್ಷಣೆ, ಕೋಲಾಟ (ಗ್ರಾಮದವರಿಂದ) |
| | 6ರಿಂದ 7.45ವರೆಗೆ | ಕಾವೇರಿಯಲ್ಲಿ ದೀಪೋತ್ಸವ ಮತ್ತು ತೆಪ್ಪೋತ್ಸವ (ಶ್ರೀರಾಮ ಮತ್ತು ಶ್ರೀ ಚನ್ನಕೇಶವ ಸ್ವಾಮಿ) |
| | 8ರಿಂದ 10.30ವರೆಗೆ | ಮೈಸೂರು ನಾಗರಾಜ್, ಮೈಸೂರು ಮಂಜುನಾಥ್ ರವರಿಂದ ಪಿಟೀಲುದ್ವಯ. |
| | ರಾತ್ರಿ 11.45-1.45 | ಕುಮಾರಿ ಮಾನಸಿ ಪ್ರಸಾದ್ ರವರಿಂದ ಹಾಡುಗಾರಿಕೆ (ವಿಶೇಷವಾಗಿ ಅವಧಾನ ಪಲ್ಲವಿ ನಿರೂಪಣೆ) |
| 23.05.04 ಭಾನುವಾರ | ಬೆಳಿಗ್ಗೆ 8.30 ಗಂಟೆಗೆ | ಶ್ರೀ ಪಟ್ಟಾಭಿರಾಮ ದೇವರ ರಥೋತ್ಸವ |
| | 10.15-12.45ವರೆಗೆ | ಚಂದನ್‌ಕುಮಾರ್ ರವರಿಂದ ಕೊಳಲು |
| | 1.00-2.00ವರೆಗೆ | ಗೋಷ್ಠಿ ಗಾಯನ, ವಿದ್ವಾನ್ ಆರ್. ಕೆ. ಪದ್ಮನಾಭ ಜೊತೆ. |
| | ಸಂಜೆ 4-6.30ವರೆಗೆ | ಸ್ಥಳೀಯ ಹಾಗೂ ಆಹ್ವಾನಿತ ಕಲಾವಿದರಿಂದ ಸಂಗೀತ ಸೇವೆ. |
| | 6.45ರಿಂದ 8.45ವರೆಗೆ | ಕುಮಾರ ಕಾರ್ತಿಕ್ ಹೆಬ್ಬಾರ್ - ಹಾಡುಗಾರಿಕೆ |
| | 9ರಿಂದ 11.15ವರೆಗೆ | ಶ್ರೀಮತಿ ಬಿ. ಜಯಶ್ರೀ ರವರಿಂದ ನಾಟಕ - ಸಂಗೀತ ಒಂದು ವಿಶೇಷ ಕಾರ್ಯಕ್ರಮ. (ದಿ|| ಗುಬ್ಬಿ ವೀರಣ್ಣರವರ ಮೊಮ್ಮಗಳು) |
| | ರಾತ್ರಿ 12 ಗಂಟೆಗೆ | ಮಂಗಳ. |

**ಕಾರ್ಯಕ್ರಮಕ್ಕೆ ಪ್ರತಿನಿಧಿ ಶುಲ್ಕ ರೂ. 150/-. ಕಾರ್ಯಕ್ರಮದಲ್ಲಿ ಭಾಗವಹಿಸುವವರು ಮುಂಗಡವಾಗಿ ಕೆಳಕಂಡವರಿಗೆ ತಿಳಿಸಬೇಕಾಗಿ ವಿನಂತಿ.**

**ಶ್ರೀಮತಿ ಆರ್. ಕೆ. ಗೀತಾಮಣಿ - 26695657**
**ಶ್ರೀ ಆರ್. ಎಲ್. ಮಂಜುನಾಥ - 26520938**
**(ಬಸ್ ಸೌಲಭ್ಯವಿರುತ್ತದೆ)**

# ಬೆಂಗಳೂರು ಸಂಕೇತಿ ಮಹಿಳಾ ಸಮಾಜ



ರುದ್ರಪಟ್ಟಣದ ದಿ|| ಶಾರದಮ್ಮನವರ ಸ್ಮರಣಾರ್ಥ ಮೂರು ಜನ ಸಮಾಜ ಸೇವಕಿಯರಿಗೆ ಸನ್ಮಾನ ಮತ್ತು ''ವ್ಯಕ್ತಿ - ವೃತ್ತಿ - ಸೇವೆ - ಸಂತೃಪ್ತಿ'' - ಈ ವಿಷಯದ ಬಗ್ಗೆ ಶ್ರೀ ಆರ್. ಕೆ. ಶ್ರೀನಿವಾಸಮೂರ್ತಿ ಯವರಿಂದ ಎರಡು ಮಾತು. ಈ ಕಾರ್ಯಕ್ರಮವನ್ನು ತಾ|| 28.02.2004 ರಂದು ಆದರ್ಶ ವನಿತಾ ಸಮಾಜದಲ್ಲಿ ಆಯೋಜಿಸಲಾಗಿತ್ತು.

''ವ್ಯಕ್ತಿಯಾಗಿ ಹುಟ್ಟಿ, ಜೀವನಕ್ಕಾಗಿ ವೃತ್ತಿಯನ್ನನುಸರಿಸಿ, ಅಲ್ಪ ಭಾಗವನ್ನಾದರೂ ಸೇವೆಗಾಗಿ ವಿನಿಯೋಗಿಸಿ, ಜೀವನದಲ್ಲಿ ಸಂತೃಪ್ತಿ ಕಾಣಬೇಕು. ಅದೇ ಜೀವನದ ಸಾರ್ಥಕ್ಯತೆ'' - ಎಂಬುದನ್ನು ಶ್ರೀ ಶ್ರೀನಿವಾಸಮೂರ್ತಿಯವರು ಬಹಳ ಚೆನ್ನಾಗಿ ವಿವರಿಸಿದರು. ಅಂದಿನ ಆತಿಥ್ಯವು ಸೇರಿದಂತೆ ಎಲ್ಲಾ ಜವಾಬ್ದಾರಿಗಳನ್ನೂ ಶ್ರೀ ಶ್ರೀನಿವಾಸಮೂರ್ತಿಗಳು ಮತ್ತು ಅವರ ಕುಟುಂಬದವರೇ ವಹಿಸಿಕೊಂಡಿದ್ದರು.

**ರು. ಕೃ. ಗೀತಾಮಣಿ** (26695657)
ಗೌ|| ಕಾರ್ಯದರ್ಶಿ

## Change of Address

**B.V.V. Subramanya (Phani)**
**Ananthalakshmi**
**No. 16, 'Shri Nilaya', Chunchaghatta Main Road,**
**Beereshwara Nagar, Konanakunte Extension**
**Bangalore - 560 062**





### ಬೆಟ್ಟದಪುರ ಸಂಕೇತಿ ಸಂಘ, ಮೈಸೂರು ಶಾಖೆ

## ಸಾಮೂಹಿಕ ಉಪನಯನದ ಕಾರ್ಯಕ್ರಮ

ದಿನಾಂಕ 21.05.2004 ಶುಕ್ರವಾರ ಸಂಘದ ಮೈಸೂರು ಶಾಖೆಯ ಆಶ್ರಯದಲ್ಲಿ ಸಾಮೂಹಿಕ ಉಪನಯನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸಂಕೇತಿ ಬಾಂಧವರು ಇದರ ಉಪಯುಕ್ತತೆಯನ್ನು ಹೆಚ್ಚಿನ ರೀತಿಯಲ್ಲಿ ಪಡೆಯಬೇಕೆಂದು ಕೋರಿಕೆ. ವಟುಗಳು ಇದ್ದಲ್ಲಿ **ಏಪ್ರಿಲ್ 30ನೇ** ತಾರೀಖಿನ ಒಳಗಾಗಿ ಶಾಖೆಯ ಅಧ್ಯಕ್ಷರಾದ **ಶ್ರೀ ಹೆಚ್.ಎಸ್. ಶ್ರೀಧರಮೂರ್ತಿ, ಮೈಸೂರು (ದೂರವಾಣಿ : 2545434)** ಅವರನ್ನು ಸಂಪರ್ಕಿಸಿ ಹೆಸರನ್ನು ನೋಂದಾಯಿಸಬೇಕಾಗಿ ವಿನಂತಿ.

**ಎಂ. ಕೆ. ಸುರೇಶ**

## ನಗರದಲ್ಲೊಂದು ನೂತನ ವಿದ್ಯಾರ್ಥಿನಿಯರ ಹಾಸ್ಟೆಲ್

ಹಲವಾರು ಉದಾತ್ತ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ಅನುಷ್ಠಾನಗೊಳಿಸಿಕೊಂಡು ಬರುತ್ತಿರುವ ಜ್ಯೋತಿ ಚಾರಿಟಬಲ್ ಟ್ರಸ್ಟ್ ಇದೀಗ ವ್ಯಾಸಂಗಾಪೇಕ್ಷಿ ಯುವತಿಯರ ಅನುಕೂಲಕ್ಕಾಗಿ ಬೆಂಗಳೂರಿನ ಕನಕಪುರ ರಸ್ತೆಯ ಯಲಚೇನಹಳ್ಳಿಯಲ್ಲಿ (ಜ್ಯೋತಿ ಕೇಂದ್ರೀಯ ವಿದ್ಯಾಲಯದ ಹತ್ತಿರವೇ) ವಿದ್ಯಾರ್ಥಿ ನಿಲಯವನ್ನು ನಿರ್ಮಿಸಿದೆ. 50 ವಿದ್ಯಾರ್ಥಿನಿಯರಿಗೆ ಸ್ಥಳಾವಕಾಶವಿರುವ ಈ ವಿದ್ಯಾರ್ಥಿ ನಿಲಯದಲ್ಲಿ ಪ್ರೀ ಯೂನಿವರ್ಸಿಟಿ, ಡಿಗ್ರಿ / ಡಿಪ್ಲೋಮಾ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಪ್ರವೇಶಾವಕಾಶವಿದೆ. ಸಂಕೇತಿ ವಿದ್ಯಾರ್ಥಿನಿಯರಿಗೆ ವಿಶೇಷ ಆದ್ಯತೆಯೂ ಇದೆ. 2004-2005ನೇ ವ್ಯಾಸಂಗ ವರ್ಷ (Academic Year) ದಿಂದ ಪ್ರವೇಶವನ್ನು ಪ್ರಾರಂಭಿಸಲಾಗುವುದು. ಆಸಕ್ತ ವಿದ್ಯಾರ್ಥಿನಿಯರು ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ, ಅಧ್ಯಕ್ಷರು, ಜ್ಯೋತಿ ಚಾರಿಟಬಲ್ ಟ್ರಸ್ಟ್, ನಂ. 31, ಪಂಪಮಹಾಕವಿ ರಸ್ತೆ, ಬೆಂಗಳೂರು - 560 004 (ದೂರವಾಣಿ ಸಂಖ್ಯೆ 26679697) ಅವರನ್ನು ಸಂಪರ್ಕಿಸಿ ಹೆಚ್ಚಿನ ವಿವರಗಳನ್ನು ಪಡೆಯಬಹುದು.

*With Best Compliments from :*

## MEGHAN COMPUTERS

**We Bring you the knowledge of computers**
**Golden Opportunities for Housewives and Students**

| | | | |
|---|---|---|---|
| 1. | Foremost Step to Computers (Fundas, Windows, Word, Excel, Power Point) | 2 Months | Rs. 800 |
| 2. | Diploma in Tally (Fundas, Windows, Tally 6.3) | 3 Months | Rs. 1800 |
| 3. | Tally 6.3 | 2 Months | Rs. 1500 |
| 4. | Programming in C (Includes Data structures, Binary Trees) | 4 Months | Rs. 2000 |
| 5. | Programming in C ++ (Pre-requisite Knowledge of C) | 1 Month | Rs. 2500 |

***For further details contact :* Nagashree Madhukar**
# 2443, 9th Main, (Opp. to Suchitra Film Society),
BSK 2nd Stage, Bangalore - 560 070.
**Ph : 26760481 / 31818614**

## H. K. SATYAPRAKASH

**Dealer in all types of products A to Z Shirt Lengths, Pant Lengths, Pressure Cookers, Copper Bottom Vessels etc.**

**Contact : 9886334667, 9844125411**







*With Best Compliments From :*

❖❖❖❖❖❖❖❖❖❖❖

## Sri Bhaskar Industries

❖❖❖❖❖❖❖❖❖❖❖

**# B - 78, Industrial Estate, Rajajinagar,**
**Bangalore - 560 044.**

**Phone : 23350646**

***With Best Compliments From :***

## ROTAMACH INDIA

**C - 20, NGEF, Ancillary Estate**

**Mahadevapura Post, White Field Road**
**Bangalore - 560 048.**

**Phone : (O) 28524226 (R) 26784112**

**Prop. S. N. SHIVA SHANKAR**

# DYNAMIC PRESENT

The past is dead, the future is unborn and nothing worthwhile can be accomplished by wasting our time about them. Present alone is the time when we achieve, give and serve. It is in these living dynamic moments we can strive to establish all the glories of life and all the benefits of existence.

Time waits for none. It is flecting. 'Now' alone is the auspicious and opportune time to initiate our programmes and plans.
Procrastination is always dangerious and unwise. If we have in mind any worthy and useful purpose to achieve it is To-day.

Opportunity comes to everyone of us. Very few of us catch hold of it and avail it to achieve ourobjectives. But the diligiant seize the opportunity and succeed in obtaining the desired results.

Let us not worry ourselves about our incapacities and short comings. Let us put forth our best efforts with determination and dedication in performing our work right now. Success is assured.

A dynamic person on his way to success does not waste his time in thinking of favourable time and place





but acts in the living present.

It is the duty of all of us to concentrate on the present and transform our ideas into great deeds.

When we perform our deeds we should never bother ourselves the pains, sorrows, hurdles and criticisms. It is HE who is actually the performer and our job is only to do HIS bidding.

To execute the imperative duties of the moment let us submit ourselves with LOVE and CHARACTER at the lotus feet of the LORD.

Today belongs to us. Remember, yesterday was, tomorrow will be, but today is with us.

R.VISWESWARIAH
Retd. Principal
No. 7/ G-3, HIG -I
Hunsur Road,
Mysore - 570 018.

## Change of Address

**Ramachandra M. K.**
**Shyamasundari**
**No. 144, House No. 419, MIG - A3, KHB Colony,**
**Kengeri Satellite Town, Bangalore - 560 060**
**Ph : 8483150**